ಸೇರಿದಂಥ ದೋಣಿ. ನಿನ್ನೆ ೭-೫೦ಕ್ಕೆ ಈ ಘಟನೆ ಸಂಭವಿಸಿದೆ. ಯಾರೂ ರಕ್ಷಣೆ ಮಾಡುವ ಜನರು ಇರಲಿಲ್ಲ. ಒಬ್ಬೊಬ್ಬರನ್ನೂ ಈಜಿಕೊಂಡು ಸಾಗಿಸಿಬಿಟ್ಟಿದ್ದಾರೆ. ೪ ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಸತ್ತಿದ್ದಾರೆ. ಒಟ್ಟು ೨೦ ಜನ ಆ ದೋಣಿಯಲ್ಲಿದ್ದರು ಸುಮಾರು ಎರಡು ದೋಣಿ ಜನ ಇದ್ದರು. ಪ್ರವಾಸಿಗರಿಗೆ ರಕ್ಷಣೆ ಕೊಡತಕ್ಕದ್ದು ಅವಶ್ಯಕವಾಗಿದೆ. ಯಾರು ಸತ್ತಿದ್ದಾರೆ ಅವರ ಹೆಣಗಳನ್ನು ಸಾಗಿಸುವ ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕು ಮತ್ತು ಯಾವ ರೀತಿ ಅನುಕೂಲ ಮಾಡಿಕೊಡಬೇಕೋ.....

ಅಧ್ಯಕ್ಷರು.—ನಾನು ಸರ್ಕಾರಕ್ಕೆ ಕಳಿಸುತ್ತೇನೆ. ತಾವೇ ಎಲ್ಲಾ ಹೇಳಿದರೆ ಸರ್ಕಾರಕ್ಕೆ ಏನು ಉಳಿಯಿತು. You are giving all the details. Then, why do you call the attention of the Government. ಮುಳುಗಿದವರಿಗೆ, ತೇಲಿದವರಿಗೆ ರಕ್ಷಣೆ ಕೊಡಬೇಕು ಎಂದು ಎಲ್ಲಾ ಹೇಳಿದರೆ ಸರ್ಕಾರಕ್ಕೆ ಏನು ಉಳಿದಿದೆ.

ಶ್ರೀ ಡಿ. ಜಯದೇವರಾಜ ಅರಸ್.—ಇದು ನಿಧಾನವಾದಂಥ ವಿಚಾರ ಅಲ್ಲ. ತಮ್ಮ ಗಮನಕ್ಕೆ ತಂದಿದ್ದೇನೆ. ಕೇರಳ, ತಮಿಳುನಾಡು, ಮಹಾರಾಷ್ಟ್ರದವರು ಮಡಿದಿದ್ದಾರೆ. ರಕ್ಷಣೆ ಕೊಡುವುದು ಅವಶ್ಯಕತೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

## Announcement.

MR. SPEAKER.—Before going to the next item, I have to announce that a I have received a letter from Hon. Member Sri B. Basavalingappa stating that he has joined Congress-I Legislature party. I have also received a letter dated 21st March 1981 from the Deputy Leader of the Ka nataka Legislature Congress (I) party stating that Sri B Basavalingappa has been admitted to their party.

SRI A LAKSHMISAGAR.—Sir, this morning I have given a notice under rule 63. Kindly look into that and if it is possible, it may be listed tomorrow.

MR. SPEAKER.—Next item of the agenda, ಗಮನ ಸೆಳೆಯುವ ಸೂಚನೆಗಳು ಶ್ರೀಯುತರುಗಳಾದ ಬಿ.ವಿ. ಕಕ್ಕಿಲಾಯ, ಎ.ಜಿ. ಕೊಡಗಿ ಬಿ.ಎ. ಮೊಹಿದ್ದೀನ್ ಹಾಗೂ ಎಂ.ಸಿ. ನಾನಯ್ಯ ಅವರು.

### ಗಮನ ಸೆಳೆಯುವ ಸೂಚನೆ

ವಿಷಯ.—ಮಂಗಳೂರು ಗೊಬ್ಬರ ಕಾರ್ಖಾನೆಯು ಒಂದು ವಿಭಾಗದ ನೌಕರರ ಮುಷ್ಕರದ ಪರಿಣಾಮವಾಗಿ ಕಾರ್ಖಾನೆಯು ಉತ್ಪಾದನೆ ಸ್ಥಗಿತವಾಗಿರುವ ಬಗ್ಗೆ.

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಗೊಬ್ಬರ ಕಾರ್ಖಾನೆಯು ಒಂದು ವಿಭಾಗದ ನೌಕರರ ಮುಷ್ಕರದ ಪರಿಣಾಮವಾಗಿ ಕಾರ್ಖಾನೆಯು ಉತ್ಪಾದನೆ ಸ್ಥಗಿತವಾಗಿರುವುದರಿಂದ ಉಂಟಾಗಿರುವ ಅಪಾರ ನಷ್ಟ ಕುರಿತು ಹಾಗೂ ಈ ವಿಚಾರದಲ್ಲಿ ಸರ್ಕಾರ ಕೈಗೊಂಡ ಕ್ರಮದ ಕುರಿತು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

SRI M. VEERAPPA MOILY. (Minister for Finance)—Mr. Speaker Sir, on behalf of the Chief Minister. I make the following statement

The contract workmen engaged in the loading operations of the urea plant of M/s Mangalore Chemicals & Fertilizers Limited belong to the Mangalore Chemicals & Fertilizers Employees Association (MCFEA) an affiliate of INTUC. They had resorted to a strike from 11 th February 1981 allegedly for non-payment of wages for the period of go slow/strike resorted to by them earlier to press their demands for absorption The matter was taken up in conciliation between the contractor and the workmen by the Assistant Labour Commissioner, Mangalore on 17th February 1981 and the workmen volunteered to clear the loading backlog of the past period in the next few days and the contractor agreed to pay the amount of wages deducted for the go-slow/strike period subject to the workmen performing according to the minimum work norms agreed upon to clear the back log of loading.

2. In the meantime, the MCFEA served a notice of strike on the management on 13th February 1981 indicating their intention to go on strike with effect from 6 A.M. on 28th February 1981 in connection with their charter of demands dated 6th November 1979 which included the regularisation of contract labour. The matter was taken up in conciliation by the Labour Commissioner in Bangalore on 26th February 1981 when the representatives of the MCFEA and of the INTUC were present. The representatives of the labour contended that the following three demands should be settled immediately so as to avert the strike.

1. Abolition of contract system and confirmation of contract/casual labourers.
2. Reinstatemant of M/s Shivappa, Bhoja Shetty and Sumitra kumar.
3. Linking variable Dearness Allowance to Bangalore Index instead of All India Index as in the current settlement.

3. Regarding the first demand the Government of Karnataka had made certain suggestions for the Company's consideration, however, it was not possible for the Company to concede this demand immediately.

4. In regard to the second demand, it was pointed out that domestic enquires were being held against the concerned employees. In respect of the third demand, the issue had already been covered by the settlement dated 28th May 1980 and the management was not prepared for any deviations. The union was requested by the Labour Commissioner not to resort to strike in view of the critical position of the Company and the national importance of the Industry.

5. The conciliation failed and the Government of Karnataka through an order on 27th February 1981, referred the dispute for adjudication to the Industrial Tribunal at Bangalore with the following terms of reference.

1. Are the workmen of MCFEA justified in making the demands as indicated in their charter?

2. If not to what relief/reliefs the said workmen are entitled ?

6. The MCFEA did not pay any heed to the Labour Commissioner's request nor to the Government's reference of the dispute to adjudication and launched a strike from 28th February 1981. The Government of Karnataka noted this action and through an order on 28th February 1981 prohibited the continuance of strike by the workmen belonging to MCFEA. Despite the prohibition order the workmen continued the strike. However, with the help of the supervisors and a section of workmen belonging to Mangala Trade Union which did not participate in the strike, the management was able to keep the plant in operation.

7. Since the strike resorted to by the MCFEA workmen was illegal, the management issued notices on 1st March 1981 to the erring workmen to report to duty immediately. But the workmen did not report to duty. The striking workmen have also indulged in improper activities, such as, obstructing the entry of supervisors and other workmen, preventing vehicles from entering the plant with men and materials, destroying food stuffs being brought in and harassing the workmen who were on duty. Notices have also been issued to the loading contractors to the effect that their contracts would be terminated, if the loading activities are not restored immediately.

8. After the plant was operated smoothly for about 10 days, the urea silo was filled to capabity and consequently the plant was shutdown on 9th March 1981. The loss of production of urea from the commencement of the strike till 19th March 1981 has been about Rs. 275 lakhs and the continuing loss will be about Rs. 20 lakhs per day.

Further the strike is still continuing and plant is not functioning.

ಶ್ರೀ ಬಿ.ವಿ. ಕಕ್ಕಿಲಾಯ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರು ಇದರಲ್ಲಿ ಕೇಲವು ವಿವರಣೆಗಳನ್ನು ಕೊಡಬೇಕೆಂದು ಕೇಳಬಯಸುತ್ತಿದ್ದೇನೆ. ಮೊದಲನೆಯದಾಗಿ ಐ.ಎನ್.ಟಿ.ಯು.ಸಿ.ಗೆ ಸೇರಿದಂಥ ಕೆಲಸಗಾರರು ಅಲ್ಲಿ ಎಷ್ಟು ಜನ ಇದ್ದಾರೆ ? ಮಂಗಳೂರು ಫರ್ಟಿಲೈಜರ್ ಫಾಕ್ಟರಿಯಲ್ಲಿ ಒಟ್ಟು ನೌಕರರ ಸಂಖ್ಯೆ ಎಷ್ಟು ? ಅದರಲ್ಲಿ ಈ ಸಂಘಕ್ಕೆ ಎಷ್ಟು ಸೇರಿದ್ದಾರೆ ? ನನಗೆ ತಿಳಿದ ಮಟ್ಟಿಗೆ ಈ ಸಂಘಕ್ಕೆ ಸೇರಿದಂಥವರು ಬಹಳ ಕಡಿಮೆ ಇದ್ದಾರೆ. ಕಂಟ್ರಾಕ್ಟ್ ಲೇಬರರ್ಸ್ ಅದಕ್ಕೆ ಸದಸ್ಯರಾಗಿದ್ದಾರೆ ಖಾಕೆ ಯಾರೂ ಆಗಿಲ್ಲ. ಯಾರಿಯಾ ಶಿಲೋ ತುಂಬಿರುವುದರಿಂದ ಇವತ್ತು ಫಾಕ್ಟರಿಯನ್ನು ನಡೆಸುವುದಕ್ಕಾಗು

ತ್ತಿಲ್ಲ. ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಆತಂಕ ಬಂದಿರುವುದೇನೆಂದರೆ, ಅವರು ತಮ್ಮ ಕೆಲಸಕಾರ್ಯ ಗಳನ್ನು ಮಾಡುವುದೂ ಇಲ್ಲ, ಬೇರೆಯವರು ಅಲ್ಲಿ ಕೆಲಸ ಮಾಡುವುದಕ್ಕೂ ಬಿಡುತ್ತಿಲ್ಲ ಎನ್ನುವ ಕಾರಣ ದಿಂದ ಈಗ ಒಂದು ದಿವಸಕ್ಕೆ ೨೦ ಲಕ್ಷ ರೂಪಾಯಿಗಳು ನಷ್ಟ ಬೀಳುವಂಥಾ ಪರಿಸ್ಥಿತಿ ಬಂದಿದೆ. ಅದಕ್ಕೆ ಈಗ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಅದು ನಿಮ್ಮ ಪಕ್ಷದ ಸಂಘವಾದುದರಿಂದ ಕೇಳುತ್ತಿದ್ದೇನೆ, ಅದೇ ಬೇರೆ ಸಂಘಗಳಾಗಿದ್ದರೆ ಇದೇ ರೀತಿ ವ್ಯವಹರಿಸುತ್ತಿದ್ದರಾ ? ಅವರ ಮೇಲೆ ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ ? ಕೇವಲ ೭೦ ಜನ ಕೆಲಸಗಾರರು ಇಡೀ ಫ್ಯಾಕ್ಟರಿಯಲ್ಲಿ ಉತ್ಪಾದನೆ ಯಾಗುವುದನ್ನು ತಡೆಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಿಮ್ಮ ಸರ್ಕಾರದವರು ಇದನ್ನು ಅಡ್‌ಜ್ಯುಡಿಕೇಷನ್ ಹಾಕಿ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಿ ಅಂತ ಹೇಳಿದರೂ ಕೂಡ ಅವರು ಅಲ್ಲಿ ಮುಷ್ಕರವನ್ನ ನಡೆಸುತ್ತಿದ್ದಾರೆ ಎಂದರೆ ನಿಮ್ಮ ಸಂಘದ ನಾಯಕರ ಮೇಲೆ ಮತ್ತು ಪಕ್ಷದ ಮುಖಂಡರ ಮೇಲೆ ಸರ್ಕಾರಕ್ಕೆ ಹಿಡಿತ ಇಲ್ಲವೇ ? ನೀವು ಮಾತುಕತೆ ನಡೆಸಿ, ಅವರ ವಿವಾದ ನ್ಯಾಯ ಯುತವಾದ ಕೇಳಿಕೆಗಳೇ ಇರಬಹುದು ಅದುದರಿಂದ ಇನ್ನೊಂದು ಸಾರಿ ತಾವು ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಸಿ ಈಗಾಗಲೇ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆದು ಅದು ನಿಷ್ಫಲವಾಗಿರುವುದ ರಿಂದ ಅವರು ಮುಷ್ಕರ ನಡೆಸುತ್ತಿದ್ದಾರೆ, ಆದುದರಿಂದ ಈಗ ನೀವು ಸರ್ಕಾರದ ಮಟ್ಟದಲ್ಲಿಆಗಲೀ ಅಥವಾ ಕಾರ್ಮಿಕರ ಸಚಿವರು ಆಗಲೀ ಇಲ್ಲವೇ, ಮುಖ್ಯ ಮಂತ್ರಿಗಳಮೇ ಆಗಲೀ ಇಲ್ಲವೇ ತಾವೇ ಆಗಲಿ ಅವರನ್ನು ಕರೆಸಿ ಮಾತುಕತೆ ನಡೆಸಿ. ಕಾರ್ಮಿಕ ವಿವಾದಗಳನ್ನು ಘಟನಾತ್ಮಕವಾದ ರೀತಿಯಲ್ಲಿ ನಡೆಸಬೇಕು, ಮುಷ್ಕರ ಹೂಡುವ ಹಕ್ಕು ಅವರಿಗೆ ಇದೆ. ಆ ವಿಷಯಕ್ಕೆ ನಾನು ಈಗ ಹೋಗುವುದಿಲ್ಲ. ಆ ರೀತಿಯಲ್ಲಿ ಮಾಡುವಾಗ ಸರಿಯಾದ ಕ್ರಮದಲ್ಲಿ ಮಾಡಬೇಕು. ಆದುದರಿಂದ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ದಯಮಾಡಿ ತಿಳಿಸಿ. ಸರ್ಕಾರದವರು ಇಲ್ಲಿಯವರೆಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ? ತೆಗೆದುಕೊಳ್ಳದಿದ್ದರೆ ಮುಷ್ಕರ ಮುಂದುವರಿಯುವುದೇ ಇಲ್ಲ ಆದುದರಿಂದ ಈಗಲಾದರೂ ತಾವು ಮಧ್ಯೆ ಪ್ರವೇಶ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ ? ತಾವು ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಫ್ಯಾಕ್ಟರಿ ಆದಷ್ಟು ಬೇಗ ನಡೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ತಿಳಿಸಬಯಸುತ್ತೇನೆ ನಮ್ಮ ರಾಜ್ಯದಲ್ಲಿ ಅಬಾಲಿಸನ್ ಆಫ್ ಕಾಂಟ್ರಾಕ್ಟ್ ಸಿಸ್ಟಂ ಮತ್ತು ಕಾಂಟ್ರಾಕ್ಟ್ ಲೇಬರ್ ಆ್ಯಕ್ಟ್ ಇದ್ದರೂ ಕೂಡ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಇದನ್ನು ಹಿಂದಿನಿಂದಲೂ ಕೂಡ ಮಾಡಿಕೊಂಡು ಬಂದಿಲ್ಲ. ಆದುದರಿಂದ ತಾವು ಈಗಲಾದರೂ ಇದರ ಬಗ್ಗೆ ಏನು ಮಾತುತ್ತೀರಿ? ಕಂಟ್ರಾಕ್ಟ್ ಲೇಬರರ್ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಇವರು ಪ್ರತಿಯೊಂದು ಫ್ಯಾಕ್ಟರಿಯಲ್ಲಿಯೂ ಇದ್ದಾರೆ ಇದರಿಂದಾಗಿ ಇಂಥಾ ಒಂದು ಅವ್ಯವಸ್ಥೆ ಉಂಟಾಗುತ್ತಿದೆ. ಕಾಂಟ್ರಾಕ್ಟ್ ರ್‌ರವರು ಸರಿಯಾಗಿ ಪೇ ಮಾಡುವುದಿಲ್ಲ. ಅವರ ನ್ಯಾಯವಾದ ಕೇಳಿಕೆಗಳುಇಡೇರದೇ ಇರುವುದರಿಂದ ಕೆಲಸಕಾರ್ಯಗಳಿಗೆ ತೊಂದರೆಯಾಗುತ್ತಿದೆ. ಇದೇ ರೀತಿ ನಮ್ಮ ಫ್ಯಾಕ್ಟರಿಯಲ್ಲಿರುವ ಇತರೇ ಕಾರ್ಮಿಕ ರಿಗೂ ತೊಂದರೆಯಾಗುತ್ತಿದೆ. ಆದುದರಿಂದ ಈಗಿರುವ ಕಾಂಟ್ರಾಕ್ಟ್ ಲೇಬರರನ್ನು ರೆಗ್ಯುಲರೈಜ್ ಮಾಡಿ ಮುಂದೆ ಆ ರೀತಿ ನೇಮಕ ಮಾಡದೇ ಇರುವ ಹಾಗೆ ವ್ಯವಸ್ಥೆ ಮಾಡುತ್ತೀರಾ ? ಇದನ್ನು ಎಷ್ಟು ದಿವಸದಲ್ಲಿ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಈ ಎಲ್ಲಾ ವಿಚಾರಗಳ ಬಗ್ಗೆ ತಾವು ದಯಮಾಡಿ ಸ್ಪಷ್ಟೀಕರಣ ನೀಡಬೇಕು. ಆಮೇಲೆ ಅವರು ಏನು ಅಗ್ರಿಮೆಂಟ್ ಮಾಡಿಕೊಂಡಿದ್ದರು ಅದು ಇನ್ನು ಎಕ್ಸ್‌ಪೈರಿ ಆಗಿಲ್ಲವೆಂದು ಹೇಳುತ್ತೀರಿ. ಆದರೂ ಕೂಡ ಇವತ್ತಿನ ದಿವಸ ತಮಗಿಲ್ಲಾ ಗೊತ್ತಿರುವ ಹಾಗೆ ಬೆಂಗಳೂರಿನ ಕಾಸ್ಟ್ ಆಫ್ ಇಂಡೆಕ್ಸ್ ಅಖಿಲ ಭಾರತ ಮಟ್ಟದ ಇಂಡೆಕ್ಸ್‌ಗಿಂತ ಜಾಸ್ತಿಯಾಗಿದೆ.

ಬಹುಶಃ ಬೆಂಗಳೂರಿನಲ್ಲಿರುವಷ್ಟು ಜೀವನ ವೆಚ್ಚ ಇಡೀ ದೇಶದಲ್ಲಿ ಬೇರೆ ಎಲ್ಲೂ ಇಲ್ಲವೆಂದು ಭಾವಿಸಿದ್ದೇನೆ. ಅಖಿಲ ಭಾರತ ಮಟ್ಟದಲ್ಲಿ ಸಮೀಕ್ಷೆ ನಡೆಸಿ ನೋಡಿದಾಗ ಬೆಂಗಳೂರಿನಲ್ಲಿ ಜೀವನಾಂಶ ಮಟ್ಟ ಏರಿರುವುದು ಕಂಡುಬರುತ್ತದೆ. ನಮ್ಮ ರಾಜ್ಯದೊಳಗೆ ಇರುವ ಕೈಗಾರಿಕಾ ನೌಕರರಿಗೆ ಬೆಂಗಳೂರಿನ ಜೀವನ ವೆಚ್ಚದ ಪ್ರಕಾರ ಬೆಲೆ ಏರಿಕೆಯನ್ನು ಸರಿದೂಗಿಸಲಿಕ್ಕೆ ಬೇಕಾದ ತುಟ್ಟಿ ಭತ್ಯವನ್ನು ಕೊಡುವ ವ್ಯವಸ್ಥೆ ಮಾಡಬೇಕಾದುದು ನ್ಯಾಯ. ಅಗ್ರಿಮೆಂಟ್‌ಗೆ ಸಮಯ ಇರಬಹುದು, ಆದರೆ ಸರ್ಕಾರದವರು ಮಧ್ಯೆ ಪ್ರವೇಶ ಮಾಡಿ ಎಲ್ಲ ವಿವಾದಗಳನ್ನು ಆವರ ಹಿತರಕ್ಷಣೆಯ ದೃಷ್ಟಿಯಿಂದ ಇತ್ಯರ್ಥ ಮಾಡಿ ಕೈಗಾರಿಕೆ ಕ್ರಮಬದ್ಧವಾಗಿ ನಡೆಯುವ ರೀತಿ, ನಷ್ಟ ಸಂಭವಿಸಿದ ರೀತಿಯಲ್ಲಿ ಸಮಸ್ಯೆ ಯನ್ನು ಬಗೆಹರಿಸುವುದು ಕಷ್ಟ ಏನಲ್ಲ. ಇಲ್ಲಿ ಎಲ್ಲ ಕಾರ್ಮಿಕರ ಪ್ರಶ್ನೆ ಇಲ್ಲ, ಕೇವಲ ಕೆಲವೇ ಕಾರ್ಮಿಕರ

ಪ್ರಶ್ನೆ ಇರುವುದರಿಂದ ಅವರಿಗೆ ರಕ್ಷಣೆ ನೀಡಿ ಕಾರ್ಖಾನೆ ನಡೆಯುವಂತೆ ಮಾಡುವುದೇನು ಸರ್ಕಾರಕ್ಕೆ ದೊಡ್ಡ ಕೆಲಸವಲ್ಲ. ಒಟ್ಟಿನಲ್ಲಿ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎ. ಜಿ. ಕೊಡಗಿ.—ಅಧ್ಯಕ್ಷರೇ, ಸರ್ಕಾರ ಕೊಟ್ಟ ಹೇಳಿಕೆಯನ್ನು ನೋಡಿ ಇನ್ನೂ ಸ್ಪಷ್ಟವಾದ ಹೇಳಿಕೆಯನ್ನು ಕೊಡಬಹುದಾಗಿತ್ತು ಎಂಬ ಅಂತವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕಳೆದ ವರ್ಷ ವಿದ್ಯುಚ್ಛಕ್ತಿಯ ಆಭಾವದಿಂದ ಈ ಕಾರ್ಖಾನೆಯನ್ನು ಮುಚ್ಚಬೇಕಾದ ಸಂಭವ ಬಂದು ಕೋಟಿಗಟ್ಟಲೆ ಹಣ ನಷ್ಟವಾಗಿದೆ. ಇದು ಸಹಕಾರಿ ಕಾರ್ಖಾನೆಯಾಗಿರುವುದರಿಂದ ಷೇರುದಾರರಿಗೆ ಹಣ ಕೊಡಬೇಕಾಗಿದೆ. ಅಲ್ಲಿ ಈಗಾಗಲೇ ಸಾಕಷ್ಟು ಹಣ ನಷ್ಟವಾಗಿದೆ. ಇದು ಕಾನೂನು ಬಾಹಿರವಾಗಿ ಆಗಿರತಕ್ಕ ವಿವಾದ ಎಂಬುದನ್ನು ತಾವು ಒಪ್ಪಿದ್ದೀರಿ. ಕೊನೆಗೆ ಈ ರೀತಿ ಹೇಳಿದ್ದೀರಿ:

> "The loss of production of urea from the commencement of the strike till 19th March 1981 has been about Rs. 275 lakhs and the continuing loss will be about Rs. 20 lakhs per day. Further the strike is still continuing and plant is not functioning."

ನಾವು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದಾಗ ಇಷ್ಟು ಹೇಳಿಕೆಯನ್ನು ಕೊಟ್ಟಾಕ್ಷಣ ಸರ್ಕಾರದ ಹೊಣೆ ಮುಗಿಯಲಿಲ್ಲ. ಇಂಥ ಹೇಳಿಕೆಯನ್ನು ನಾವು ಅಪೇಕ್ಷೆಪಟ್ಟಿಲ್ಲ. ಸರ್ಕಾರ ತುರ್ತು ಕಾರ್ಯಕ್ರಮ ಕೈಗೊಂಡು ಕಾರ್ಖಾನೆ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂಬುದು ನಮ್ಮ ಉದ್ದೇಶ ಅಲ್ಲಿ ಕೋಟಿಗಟ್ಟಲೆ ಹಣ ನಷ್ಟವಾಗುವುದನ್ನು ತಪ್ಪಿಸುವುದಕ್ಕೆ ತಾವು ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ಎಂಬ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎ. ಮೊಹಿದ್ದಿನ್.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರಬಹುದು, ಇದು ನಮ್ಮ ಪ್ರದೇಶದ ಬಹಳ ಮುಖ್ಯವಾದ ಕಾರ್ಖಾನೆ. ಮಾನ್ಯ ಕಕ್ಕಿಲಾಯ ಅವರು ಹೇಳಿದ ಹಾಗೆ abolition and regulation of contract labour ಅನ್ನು ನಾವು ಎಲ್ಲೂ ಎನ್‌ಫೋರ್ಸ್ ಮಾಡಲಿಲ್ಲ. ಅಲ್ಲಿನ ಒಂದು ಜನಜನಿತವಾದ ವಿಚಾರವೇನೆಂದರೆ, ಈ ಒಂದು ಮುಷ್ಕರಕ್ಕೆ ಸರ್ಕಾರದಲ್ಲಿ ಪ್ರಭಾವ ಇರತಕ್ಕ ಜನ ಬೆಂಬಲ ಕೊಟ್ಟಿದ್ದಾರೆ ಎಂಬುದು ಅಲ್ಲಿ ಕೆಲವೇ ಜನ ಮುಷ್ಕರ ಮಾಡಿದರೂ ಕೂಡ ಅದಕ್ಕೆ ಪ್ರಭಾವೀ ವ್ಯಕ್ತಿಗಳ ಬೆಂಬಲ ಇದೆ ಎನ್ನುವಂಥ ಜನಜನಿತ ವಿಚಾರ ನಮ್ಮ ಪ್ರದೇಶದಲ್ಲಿದೆ. The striking workmen have also indulged in improper activities. ಅದಕ್ಕಾಗಿ ಕೇಳುತ್ತೇನೆ. ಹೀಗೆ ಮುಷ್ಕರ ನಿರತರವಾದ ಎಷ್ಟು ಜನರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದೀರಿ ಎಂದು ಇದನ್ನು ತಾವು ದಯವಿಟ್ಟು ತಿಳಿಸಬೇಕು. ಈ ಮುಷ್ಕರದ ಹಿಂದೆ ಯಾರು ಬೆಂಬಲವಾಗಿ ಇದ್ದಾರೆ ಮತ್ತು ಆ ನಾಯಕರನ್ನು ಕರೆದು ಮಾತನಾಡಿದ್ದೀರಾ—ಈ ಎಲ್ಲ ವಿವರಗಳನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಂಗಳೂರು ಕೆಮಿಕಲ್ಸ್ ಫರ್ಟಿಲೈಸರ್ ಕಾರ್ಖಾನೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಪ್ರಾಮುಖ್ಯವಾದ ಸಂಸ್ಥೆ. ಇಲ್ಲಿ ಮಾನ್ಯ ಕಕ್ಕಿಲಾಯರವರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಅಲ್ಲಿ ಎಷ್ಟು ನೌಕರರಿದ್ದಾರೆಂದರೆ, ಕಾಂಟ್ರಾಕ್ಟ್ ಎಂಪ್ಲಾಯೀಸ್ ೩೦೦ ಮಂದಿ ಮತ್ತು ಒಟ್ಟು ನೌಕರರು ೧೮೦೦ ಮಂದಿ. ಕಾಂಟ್ರಾಕ್ಟ್ ಎಂಪ್ಲಾಯೀಸ್ ಎಲ್ಲ ಇಂಟರ್ ಯೂನಿಯನ್‌ನಲ್ಲಿದ್ದಾರೆ. ಅಲ್ಲಿ ಈಗ ಮುಷ್ಕರ ಮಾಡಿರುವವರು ೩೦೦ ಮಂದಿ ನೌಕರರು. ಕಾಂಟ್ರಾಕ್ಟ್ ಲೇಬರ್ ಬಗ್ಗೆ ಕೇಂದ್ರ ಸರ್ಕಾರ ಒಂದು ಕಾನೂನು ಮಾಡಿದ್ದು ಸರಿ. ಆದರೆ ಆ ಕಾನೂನು ಪ್ರಕಾರ ಒಂದು ಸಮಿತಿಯನ್ನು ಅವರು ಮಾಡಬೇಕಾಗಿತ್ತು. ಆ ಸಮಿತಿಯನ್ನು ಮಾಡಿ, ಅದು ರೆಗ್ಯುಲರೈಸೇಷನ್ ಅನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ವರದಿಯನ್ನು ಕೊಟ್ಟಾಗ ಮಾತ್ರ ಈ ರೆಗ್ಯುಲರೈಸೇಷನ್ ಅನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ನೀತಿ ಮಂಗಳೂರು ಫರ್ಟಿಲೈಸರ್ ಫ್ಯಾಕ್ಟರಿಗೆ ಮಾತ್ರ ಸೀಮಿತವಾಗಿರದೆ ಇಡೀ ದೇಶದ ಎಲ್ಲ ಫರ್ಟಿಲೈಸರ್ ಫ್ಯಾಕ್ಟರಿಗಳಿಗೂ ಅನ್ವಯವಾಗುತ್ತದೆ. ಇಡೀ ದೇಶದ ಎಲ್ಲ ಫರ್ಟಿಲೈಸರ್ ಫ್ಯಾಕ್ಟರಿಗಳಲ್ಲಿ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸವನ್ನು ಕಾಂಟ್ರಾಕ್ಟ್ ಲೇಬರರ್ಸ್ ಮಾಡುತ್ತಿದ್ದಾರೆ. ಅದೇ ರೀತಿ ಮಂಗಳೂರಿನಲ್ಲಿ

ಕೂಡ ನಡೆಯುತ್ತಿದೆ. ಇದು ಮಂಗಳೂರು ಫರ್ಟಿಲೈಸರ್ ಫ್ಯಾಕ್ಟರಿಗೆ ಹೊಸ ಕ್ರಮ ಏನು ಅಲ್ಲ. ಇದು ಇಡೀ ದೇಶದ ಎಲ್ಲ ಫರ್ಟಿಲೈಸರ್ ಫ್ಯಾಕ್ಟರಿಗಳಲ್ಲಿ ಇರತಕ್ಕ ನೀತಿ. ಅದನ್ನು ಸರಿಮಾಡುವ ಸಲುವಾಗಿ ಯಾವ ಒಂದು ಸಮಿತಿಯನ್ನು ಕೇಂದ್ರ ಸರ್ಕಾರ ಮಾಡಬೇಕೋ ಅದನ್ನು ಮಾಡಿ, ಅದು ವರದಿ ಕೊಟ್ಟಮೇಲೆ ವಿಚಾರವನ್ನು ಪರಿಶೀಲನೆ ಮಾಡಬಹುದು. ಯಾವ ಒಂದು ಬೇಡಿಕೆಗಳನ್ನು ಯೂನಿಯನ್ ನವರು ಕೊಟ್ಟಿದ್ದಾರೋ ಅವನ್ನು ನಾವು ಇಂಡಸ್ಟ್ರಿಯಲ್ ಟ್ರಿಬ್ಯುನಲ್ಲಿಗೆ ಒಪ್ಪಿಸಿದ್ದೇವೆ. ಅವರ ನಿರ್ಣಯ ಏನು ಬರುತ್ತದೆಂಬುದನ್ನು ನೋಡೋಣ. ಇಂಟೆಕ್ ಯೂನಿಯನ್ ಆದರೂ ಕೂಡ ಅದರದ್ದೇ ಅದ ಒಂದು ರೀತಿಯ ಚಟುವಟಿಕೆ ಇರುತ್ತದೆ ಮತ್ತು ಕಾರ್ಯಕ್ಷೇತ್ರ ಇರುತ್ತದೆ. ಆದರೆ ಸರ್ಕಾರ ಹೇಳಿದ ಹಾಗೆ ಕೇಳತಕ್ಕ ಯೂನಿಯನ್ ಅನ್ನು ಬೆಳಸಿಕೊಂಡು ಹೋಗಬೇಕೆಂದರೆ ಅದು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಅದನ್ನು ನಾವು ಕೇಳಲಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಂಗಳೂರು ಫರ್ಟಿಲೈಸರ್ ಕಾರ್ಖಾನೆಯಲ್ಲಿ ಮುಷ್ಕರ ಆದ ಕೂಡಲೇ ಸರ್ಕಾರ ಲೇಬರ್ ಕಮಿಷನರ್‌ರವರ ಮಟ್ಟದಲ್ಲಿ ಸಾಕಷ್ಟು ಚರ್ಚೆ ಮಾಡಿದೆ. ನಾನೂ ಕೂಡ ಆ ಜಿಲ್ಲೆಯವನಾದ್ದರಿಂದ ನನ್ನ ಕಛೇರಿಯಲ್ಲಿ ಕೂಡ ಚರ್ಚೆ ಮಾಡಿದ್ದೇನೆ. ಇಂಟಕ್ ಯೂನಿಯನ್ ನಾಯಕರನ್ನು ಮತ್ತು ಪ್ರತಿನಿಧಿಗಳನ್ನು ಕರೆದು ಸಾಕಷ್ಟು ಚರ್ಚೆ ಮಾಡಿ ಸಾಧಕ ಬಾಧಕಗಳನ್ನು ಮಾತನಾಡಿದರೂ ಕೂಡ ಅವರಿಗೆ ತೃಪ್ತಿಯಾಗಲಿಲ್ಲ. ಆ ಮಾತುಕತೆಯಲ್ಲಿಗೇ ಮುಂಡಿಯಿತು. ಈಗ ಮಾನ್ಯ ಮುಖ್ಯ ಮಂತ್ರಿಗಳು ಮಂಗಳೂರಿನಲ್ಲೇ ಇದ್ದಾರೆ ಅಲ್ಲಿ ಅವರು ಇದಕ್ಕೆ ಸಂಬಂಧಪಟ್ಟ ಯಾವ ಲೇಬರ್ ಯೂನಿಯನ್ ಲೀಡರ್ಸ್ ಇದ್ದಾರೆ ಅವರನ್ನು ಕರೆಸಿ ಮಾತುಕತೆ ಮಾಡಿ ಪ್ರಮುಖವಾದ ಮತ್ತು ನ್ಯಾಯವಾದ ಬೇಡಿಕೆ ಯಾವುದೆ ಇದೆ ಅದನ್ನು ಪರಿಶೀಲಿಸಬಹುದೆಂದು ಹೇಳಿದ್ದಾರೆ. ಈ ಸಮಸ್ಯೆಗಳನ್ನೆಲ್ಲ ಟ್ರಿಬ್ಯುನಲ್ ವಿಚಾರ ಮಾಡುತ್ತದೆ ಮತ್ತು ಸರ್ಕಾರ ಯಾವುದನ್ನು ಮಾಡಬಹುದೋ ಅದನ್ನು ಮಾಡುವುದಕ್ಕೆ ಸಿದ್ಧವಿದೆ. ಆದರೆ ಏಕಾಏಕಿ ಈಗಲೇ ತೀರ್ಮಾನ ಮಾಡಬೇಕೆಂದು ಪಟ್ಟು ಹಿಡಿದರೆ ಏನೂ ತೀರ್ಮಾನವಾಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅವರೊಂದಿಗೆ ಮಾತುಕತೆ ಮಾಡುತ್ತಾರೆಂದೂ ಮತ್ತು ಅವರಿಂದ ಆ ನೌಕರರು ತೃಪ್ತಿಹೊಂದಿ ಪುನಃ ಕೆಲಸಕ್ಕೆ ಹೋಗುತ್ತಾರೆಂದು ನನಗನ್ನಿಸುತ್ತದೆ ಮತ್ತು ಸರ್ಕಾರ ಕೂಡ ಇಂಥ ಒಂದು ಆಶಯವನ್ನು ಇಟ್ಟುಕೊಂಡಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅಡ್‌ಜುಡಿಕೇಷನ್ನಿಗೆ ಹಾಕಿದ್ದೀರಿ. ಆದ್ದರಿಂದ ಈ ಪ್ರಶ್ನೆಯನ್ನು ಇಲ್ಲಿಗೆ ಬಿಡುವುದಕ್ಕಾಗುವುದಿಲ್ಲ ಅಬಾಲಿಷನ್ ಆಫ್ ಕಾಂಟ್ರಾಕ್ಟ್ ಸಿಸ್ಟಂ ಬಗ್ಗೆ ಅವರು ಏನು ಕೇಳಿದ್ದಾರೆಂದರೆ ರಾಜ್ಯ ಸರ್ಕಾರದವರು ಈ ಕಾನೂನನ್ನು ಜಾರಿಗೆ ತರುವ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ. ಅದನ್ನು ಮಾಡದೆ ಇದ್ದರೆ ಟ್ರಿಬ್ಯುನಲ್‌ನಲ್ಲಿ ಅವರಿಗೆ ಏನು ನ್ಯಾಯ ಸಿಗುವುದಿಲ್ಲ ಮತ್ತು ಆ ವಿವಾದ ತೀರ್ಮಾನವಾಗುವುದಕ್ಕೂ ಸಾಧ್ಯವಿಲ್ಲ. ಆದುದರಿಂದ, ಇದನ್ನು ಬಾಕಿ ಇಟ್ಟು ಟ್ರಿಬ್ಯುನಲ್ಲಿಗೆ ಕಳುಹಿಸಿದರೆ ಏನು ಪ್ರಯೋಜನವಾಗುವುದಿಲ್ಲ. ಮೊದಲು ಈ ಕೆಲಸವನ್ನು ರಾಜ್ಯ ಸರ್ಕಾರದವರು ಮಾಡಬೇಕೆಂದು ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ತುಟಿ ಭಕ್ತಿಯ ವಿಚಾರ ಏನಿದೆ ಇದು ಬಹಳ ಚಿಕ್ಕ ವಿಚಾರವಾದ್ದರಿಂದ ಈ ಬಗ್ಗೆ ಸರ್ಕಾರವೇ ನೇರವಾಗಿ ಪ್ರಯತ್ನ ಮಾಡಿದರೆ ಈ ಪ್ರಶ್ನೆ ಬಗೆಹರಿಯುತ್ತದೆ. ಟ್ರಿಬ್ಯುನಲ್ಲಿಗೆ ಕಾಕಿದಾಕ್ಷಣ ಯಾವುದೂ ಬಗೆಹರಿಯುವುದಿಲ್ಲ. ಮುಷ್ಕರ ನಡೆಯುತ್ತಲೇ ಇರುತ್ತದೆ. ಹೀಗೆ ಮುಷ್ಕರ ನಡೆದಾಗ ಕಾನೂನು ಪ್ರಕಾರ ಅವರನ್ನು ಹೊಡೆಯುವುದು ಬಡಿಯುವುದು ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ. ಆದ್ದರಿಂದ, ದಯವಿಟ್ಟು ಆ ರೀತಿ ಮಾಡುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ. ಅವರೂ ಕೂಡ ತಮ್ಮ ಪಕ್ಷಕ್ಕೆ ಸೇರಿದವರು ಆಗಿದ್ದಾರೆ. ಹೀಗಿರುವಾಗ, ತಮಗೆ ಇರತಕ್ಕ ಎಲ್ಲ ಶಕ್ತಿಯನ್ನು ಉಪಯೋಗ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

2-30 P. M.

ಶ್ರೀ ಎಂ ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗೆ ಇದನ್ನು ಒಪ್ಪಿಸಿದರೂ ಕೂಡ ಸರ್ಕಾರದ ಹಂತದಲ್ಲಾಗಲೀ, ಮುಖ್ಯ ಮಂತ್ರಿಗಳ ಹಂತದಲ್ಲಾಗಲೀ ಅಥವಾ ಸಚಿವರ ಹಂತದಲ್ಲಾಗಲೀ ಒಪ್ಪಂದವಾಗಿ ಆದಷ್ಟು ಬೇಗ ಕಾರ್ಖಾನೆ ಪ್ರಾರಂಭವಾಗಬೇಕು ಎಂಬ

ಆಸ್ಥೆಯನ್ನು ಸರ್ಕಾರ ಇಟ್ಟುಕೊಂಡಿದೆ. ಕಾಂಟ್ರಾಕ್ಟ್ ಲೇಬರರ್ಸ್ ಬಗ್ಗೆ ಸಮಿತಿ ಮಾಡುವುದಕ್ಕೆ ನಾವು ರೀಫ್ರೆಷ್ ಆಗಿ ಹೆಜ್ಜೆ ಇಡುತ್ತೇವೆ. ಟ್ರಿಬ್ಯುನಲ್‌ಗೆ ಒಪ್ಪಿಸಿದ ಕೂಡಲೇ ಈ ವಿಚಾರವನ್ನು ಅಲ್ಲೇ ಬಿಟ್ಟಿದ್ದೇವೆ ಎಂಬುದು ಅರ್ಥವಲ್ಲ. ಈ ಬಗ್ಗೆ ನಾನೂ ಕೂಡ ಮಾತನಾಡಿದ್ದೇನೆ ಎಲ್ಲಾ ವಿಚಾರಗಳನ್ನೂ ಒಂದೇ ಸಾರಿ ತೀರ್ಮಾನ ಮಾಡಬೇಕು ಎಂದು ಪಟ್ಟು ಹಿಡಿದಿದ್ದರಿಂದ ಮಾತುಕತೆ ಫಲಪ್ರದವಾಗಲಿಲ್ಲ. ಕೇವು ಬೇಡಿಕೆಗಳ ಬಗ್ಗೆ ತೀರ್ಮಾನ ತೆಗೆದುಕೊಂಡು ನಿರ್ಣಯ ಮಾಡುವುದಕ್ಕೆ ಸಾಧ್ಯವಿದ್ದರೂ ಕೂಡ ಯೂನಿಯನ್ನಿನವರು ಎಲ್ಲಾ ಬೇಡಿಕೆಗಳನ್ನೂ ಒಟ್ಟಿಗೆ ತೀರ್ಮಾನ ಮಾಡಬೇಕೆಂದು ಪಟ್ಟು ಹಿಡಿದಿದ್ದರಿಂದ ಸಾಕಷ್ಟು ತೊಂದರೆಯಾಗಿ ಮಾತುಕತೆ ತೃಪ್ತಿಕರವಾಗಿ ಆಗಲಿಲ್ಲ. ನಾನು ಈಗಾಗಲೇ ಹೇಳಿದಂತೆ ಮಾನ್ಯ ಮುಖ್ಯಮಂತ್ರಿಯವರು ಮಂಗಳೂರಿನಲ್ಲಿ ಮಾತುಕತೆ ಮಾಡುತ್ತಿದ್ದಾರೆ. ಇದರಿಂದ ಸರಿಯಾದ ಒಪ್ಪಂದವಾಗಿ ಪರಿಹಾರ ಖಂಡಿತ ಸಿಗುತ್ತದೆ ಎಂಬ ಆಸೆಯನ್ನು ಸರ್ಕಾರ ಇಟ್ಟುಕೊಂಡಿದೆ.

(ii) ವಿಷಯ : ರೇಷ್ಮೆ ಇಲಾಖೆಯಲ್ಲಿ ಕೀಟ ಪರೀಕ್ಷಕರ ಸೇವೆಗಳನ್ನು ಖಾಯಂ ಮಾಡದೇ ಇರುವುದರಿಂದ ಅವರಿಗೆ ಉಂಟಾಗಿರುವ ತೊಂದರೆ ಬಗ್ಗೆ.

ಶ್ರೀ ಎಂ. ವಿಸ್. ಆತ್ಮಾನಂದ.— ಮಾನ್ಯ ಅಧ್ಯಕ್ಷರೇ, ರೇಷ್ಮೆ ಇಲಾಖೆಯಲ್ಲಿ ಕೀಟ ಪರೀಕ್ಷಕರ ಸೇವೆಗಳನ್ನು ಖಾಯಂ ಮಾಡದೇ ಇರುವುದರಿಂದ ಅವರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ರೇಷ್ಮೆ ಖಾತೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

† ಶ್ರೀಮತಿ ರೇಣುಕಾ ರಾಜೇಂದ್ರನ್ (ರೇಷ್ಮೆ ಖಾತೆ ಸಚಿವರು).— Sir.....

ಶ್ರೀ ಪಿ. ರಾಮದೇವ್.— ನೀವು ಕನ್ನಡದಲ್ಲಿ ಜೆನ್ನಾಗಿ ಮಾತನಾಡುತ್ತೀರಿ. ಆದ್ದರಿಂದ ಕನ್ನಡದಲ್ಲೇ ಹೇಳಿಕೆ ಕೊಡಿ.

ಶ್ರೀಮತಿ ರೇಣುಕಾ ರಾಜೇಂದ್ರನ್.— ಹೇಳಿಕೆ ಇಂಗ್ಲೀಷಿನಲ್ಲೂ ಇದೆ, ಕನ್ನಡದಲ್ಲೂ ಇದೆ. ಆದರೆ ಕನ್ನಡದಲ್ಲಿ ಸ್ವಲ್ಪ ಕಷ್ಟವಾಗುತ್ತದೆ.....

ಶ್ರೀ ಎಂ. ಚಂದ್ರಶೇಖರ್.—ಕನ್ನಡದಲ್ಲಿ ಸಿದ್ಧ ಮಾಡಿ ಇಂಗ್ಲೀಷಿನಲ್ಲಿ ಏತಕ್ಕೆ ಓದುತ್ತೀರಿ ?

ಶ್ರೀಮತಿ ರೇಣುಕಾ ರಾಜೇಂದ್ರನ್.—೧೯೭೮ ಡಿಸೆಂಬರ್‌ನಲ್ಲಿ ಬೈವಾಲ್ಟೀನ್ ಮತ್ತು ಮೈಸೂರು ಬಿತ್ತನೆ ಪ್ರದೇಶಗಳಲ್ಲಿ ಕೆಲವೊಂದು ರೋಗಗಳು ಅದರಲ್ಲೂ ಪೆಬ್ರಿನ್ (ಗಂಟುರೋಗ) ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿತು. ಗಂಟುರೋಗ ತಾಯಿ ಚಿಟ್ಟೆಯಿಂದ ಮೊಟ್ಟೆಗಳ ಅಮಾನುಷಾಂತರ ಮರಿಗಳಿಗೆ ಸಾಗಲ್ಪಡುತ್ತದೆ. ರೋಗ ಹರಡುವುದನ್ನು ತಡೆಗಟ್ಟಲು ಮತ್ತು ರೋಗವನ್ನು ಹತೋಟಿಯಲ್ಲಿಡಲು ರೋಗಗ್ರಸ್ಥ ಮೊಟ್ಟೆಗಳನ್ನು ನಾಶಪಡಿಸಬೇಕು. ಮೊಟ್ಟೆಗಳು ರೋಗಗ್ರಸ್ಥ ಮೊಟ್ಟೆಗಳೇ ಅಥವಾ ಇಲ್ಲವೇ ಎಂಬುದನ್ನು ಖಾತರಿ ಪಡಿಸಿಕೊಳ್ಳಲು ತಾಯಿ ಚಿಟ್ಟೆಗಳನ್ನು ಹಾಗೂ ಪ್ಯೂಪಾ(ಗೂಡಿನೊಳಗಿರುವ ಹುಳು)ವನ್ನು ಸೂಕ್ಷ್ಮ ದರ್ಶಕದ ಪರೀಕ್ಷೆಗೆ ಒಳಪಡಿಸಬೇಕು. ಪ್ಯೂಪಾ ಮತ್ತು ತಾಯಿ ಚಿಟ್ಟೆಗಳನ್ನು ಅರೆದು ಅವುಗಳಲ್ಲಿರುವ ಕೊಬ್ಬನ್ನು ಪೊಟಾಷಿಯಂ ಹೈಡ್ರಾಕ್ಸೈಡ್‌ನಿಂದ ಕರಗಿಸಿ ಶರೀರದ ದ್ರವವನ್ನು ಗಾಜಿನ ಸ್ಲೈಡಿನ ಮೇಲೆ ಹಾಕಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಲಾಗುವುದು. ಒಂದು ಅಥವಾ ಎರಡು ಪೆಬ್ರಿನ್ ಕಣಗಳು ಕಾಣಬಂದರೆ ತಾಯಿ ಚಿಟ್ಟೆಯಲ್ಲಿ ಸುಮಾರು ೨೦,೦೦೦ ರಿಂದ ೩೦,೦೦೦ ಕಣಗಳಿವೆಯೆಂಬುದು ಖಚಿತ. ಪರೀಕ್ಷಕನ ದೃಷ್ಟಿಗೆ ಈ ಒಂದೆರಡು ಕಣಗಳು ಬೀಳದಿದ್ದರೆ, ತಾಯಿ ಚಿಟ್ಟೆ ಇಟ್ಟ ಹತ್ತಿಗಳ ಮುಖಾಂತರ ಈ ಅನೇಕ ಕಣಗಳು ಹುಳು ಸಾಕಾಣಿಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತದೆ. ಆದುದರಿಂದ ಎಚ್ಚರಿಕೆಯಿಂದ ಪರೀಕ್ಷೆ ಮಾಡುವುದು ಅತಿ ಮುಖ್ಯ. ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆಯಲ್ಲಿ ಪೆಬ್ರಿನ್ ಕಣಗಳು ಕಂಡು ಬಂದರೆ ಆ ಹೆಣ್ಣು ಚಿಟ್ಟೆ ಇಟ್ಟ ಮೊಟ್ಟೆಗಳನ್ನೆಲ್ಲಾ ನಾಶಪಡಿಸಲಾಗುವುದು. ಇದಲ್ಲದೆ, ಬಿತ್ತನೆ ಗೂಡನ್ನು ತಂದಾಗ, ಕಳಪೆ ಬಿತ್ತನೆ ಗೂಡನ್ನು ಆರಿಸಿ ಅದರಲ್ಲಿರುವ ಪ್ಯೂಪಾವನ್ನು ಪರೀಕ್ಷಿಸಲಾಗುವುದು. ಪರೀಕ್ಷೆಯಲ್ಲಿ ಕಣಗಳು ಕಂಡು ಬಂದರೆ ಬಿತ್ತನೆಗೆ ತಂದ ಗೂಡನ್ನು ಬಿತ್ತನೆಗೆ ಉಪಯೋಗಿಸದೆ ನೂಲು ಬಿಚ್ಚಣಿಕೆಗೆ ಉಪಯೋಗಿಸಲಾಗುವುದು. ಒಬ್ಬರು ೮ ಗಂಟೆಗಳ ಕಾಲದಲ್ಲಿ ಸುಮಾರು ೬೦೦ ಚಿಟ್ಟೆಗಳನ್ನು ಪರೀಕ್ಷಿಸಬಹುದು. ಬಿತ್ತನೆಗೆ ಬೇಕಾದ ಮೊಟ್ಟೆಗಳ ತಯಾರಿಕೆಯಲ್ಲಿ ಎಲ್ಲಾ ಚಿಟ್ಟೆಗಳನ್ನು (ಶೇಕಡಾ ೧೦೦ರಷ್ಟು) ಪರೀಕ್ಷಿಸಲಾಗುವುದು. ಮಿಶ್ರತಳಿ ಮೊಟ್ಟೆಗಳ ಉತ್ಪಾದನೆ ಮಾಡುವಾಗ ಶೇಕಡಾ